ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫಸಿ, ನ್ಯಾಯಾಲಯ ಅಂಕೋಲಾ
ಸಿಸಿ ನಂಬರ **292**/2020

ಸಿ ಡಬ್ಲ್ಯೂ- **3**

ಪಿ ಡಬ್ಲ್ಯೂ- **2**

ದಿಃ 16-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ವಿನಾಯಕ ಶೆಟ್ಟಿ
ತಂದೆಯ ಹೆಸರುಃ ರಾಯೇಶ್ವರ
ವಯಸ್ಸುಃ **45** ವರ್ಷ
ಉದ್ಯೋಗಃ ಭದ್ರತಾ ರಕ್ಷಕ, ಕೆ.ಎಸ್.ಆರ್.ಟಿ.ಸಿ. ಘಟಕ, ಅಂಕೋಲಾ
ವಿಳಾಸಃ ಕುಮಟಾ

ಮುಖ್ಯ ವಿಚಾರಣೆ ಮಾನ್ಯ ಎ ಪಿ ಪಿ ಯವರಿಂದಃ

ಕಳೆದ ಒಂಭತ್ತು ವರ್ಷಗಳಿಂದ ಅಂಕೋಲಾ ಕೆ.ಎಸ್.ಆರ್.ಟಿ.ಸಿ. ಘಟಕದಲ್ಲಿ ಭದ್ರತಾ ರಕ್ಷಕನೆಂದು ಸೇವೆ ಸಲ್ಲಿಸುತ್ತಿದ್ದೇನೆ. **2018** ರಲ್ಲಿ ಚಾಸಾ-**1** ರವರು ಅಂಕೋಲಾ ಕೆ.ಎಸ್.ಆರ್.ಟಿ.ಸಿ. ಘಟಕ ಡಿಪೋ ಮ್ಯಾನೇಜರ ಎಂದು ಸೇವೆ ಸಲ್ಲಿಸುತ್ತಿದ್ದರು. ಚಾಸಾ-**2**, **4** ರಿಂದ **9** ಕೆ.ಎಸ್.ಆರ್.ಟಿ.ಸಿ. ಘಟಕದ ಸಿಬ್ಬಂದಿಗಳಿರುತ್ತಾರೆ. ಆರೋಪಿ **2018** ರಲ್ಲಿ ಚಾಲಕ ಎಂದು ಸೇವೆ ಸಲ್ಲಿಸುತ್ತಿದ್ದ. ದಿಃ **12-08-2018** ರಂದು ನಾನು ರಾತ್ರಿ **10.00** ಗಂಟೆಗೆ ಸೇವೆಗೆ ಹಾಜರಾಗಿದ್ದು, ಘಟನೆ ಸಮಯದಲ್ಲಿ ನಾನಿರಲಿಲ್ಲ. ಘಟನೆ ಕುರಿತು ಹೇಳಿಕೆ ನೀಡಿಲ್ಲ. ಘಟನೆ ಆಗಿದೆ ಎಂದು ಹೇಳುವ ಎರಡು ದಿವಸದ ನಂತರ ಪೊಲೀಸರು ಡಿಪೋಗೆ ಬಂದು ಪಂಚನಾಮೆಗೆ

ಸಹಿ ಪಡೆದಿರುತ್ತಾರೆ. ಘಟನಾಸ್ಥಳದ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-9, ಸಾಕ್ಷಿ ಸಹಿಯನ್ನು ನಿಪಿ-9 ಎ ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಸ್ಥಳದಲ್ಲಿ ಹಾಜರಿರಲಿಲ್ಲ, ಆದರೆ ಘಟಕದ ಮುಖ್ಯದ್ವಾರದ ಬಳಿ ನಾನಿದ್ದಾಗ ಸಹಿ ಪಡೆದಿರುತ್ತಾರೆ. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ಮಾಹಿತಿ ಇಲ್ಲ.

ಈ ಹಂತದಲ್ಲಿ ಎ.ಪಿ.ಪಿ. ಯವರು ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕಾಗಿ ಕೋರಿಕೊಂಡಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲಾಗಿರುತ್ತದೆ. ಎ.ಪಿ.ಪಿ.ಯವರಿಗೆ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.

<u>ಪಾಟಿ ಸವಾಲುಃ ಎ.ಪಿ.ಪಿ. ಯವರಿಂದಃ</u>

ದಿಃ 30-07-2018 ಮತ್ತು 31-07-2018 ರಂದು ಡ್ಯೂಟಿ ವಿಚಾರವಾಗಿ ಚಾಸಾ-6 ರವರು ಆರೋಪಿ ಫೋನಿನಲ್ಲಿ ಅವಾಚ್ಯ ಶಬ್ದಗಳಿಂದ ಬೈದಿದಕ್ಕಾಗಿ ಕ್ರಮ ಕೈಗೊಳ್ಳಲು ಶಿರಸಿ ಉಪವಿಭಾಗಕ್ಕೆ ಪತ್ರ ರವಾನೆ ಮಾಡಲಾಗಿತ್ತು ಎಂದರೆ ಗೊತ್ತಿಲ್ಲ. ದಿಃ 12-08-2018 ರಂದು ಬೆಳಿಗ್ಗೆ 9.30 ಗಂಟೆಗೆ KSRTC ಡಿಪೋದ ಮುಖ್ಯದ್ವಾರದ ಬಳಿ ಕರ್ತವ್ಯದಲ್ಲಿದ್ದಾಗ ಆರೋಪಿತನು ಚಾಸಾ-7 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ನಿನಗೆ ಒಂದು ಗತಿ ಕಾಣಿಸುತ್ತೇನೆ, ಇನ್ನು ಮುಂದೆ ಅಂಕೋಲಾದಲ್ಲಿ ಹೇಗೆ ಇರುತ್ತೀ ನೋಡಿಕೊಳ್ಳುತ್ತೇನೆ ಎಂದು ಬಲಗಾಲಿನಿಂದ ಒದೆಯಲು ಪ್ರಯತ್ನಿಸಿದಾಗ ಚಾಸಾ-7 ರವರು ತಪ್ಪಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಅದೇ ರೀತಿ ಚಾಸಾ-6 ರವರಿಗೂ ಸಹ ತನ್ನ ಸಸ್ಪೆಂಡ್ ಮಾಡಿಸುವ ವಿಚಾರವಾಗಿ ಪತ್ರ ರವಾನೆ ಮಾಡುತ್ತೀರಾ ಎಂದು ಬೆದರಿಕೆ ಹಾಕಿದ್ದ ಎಂದರೆ ಸರಿಯಲ್ಲ. ಈ ಕುರಿತು ಚಾಸಾ-6 ರವರು ಚಾಸಾ-1 ರವರಿಗೆ ತಿಳಿಸಿದ್ದರು ಎಂದರೆ ಗೊತ್ತಿಲ್ಲ. ನಂತರ ಚಾಸಾ-1 ರವರಿಗೆ ಆರೋಪಿ ಮೊಬೈಲ್ ಕರೆ ಮುಖಾಂತರ ಜೀವ ಬೇದರಿಕೆ ಹಾಕಿ, ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಈ ಕುರಿತು ನಿಪಿ-10 ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ-7 ರವರು ತೋರಿಸಿದ ಸ್ಥಳವನ್ನು ಪೊಲೀಸರು ಪಂಚನಾಮೆ ಮಾಡಿದ್ದು, ಅದಕ್ಕೆ ಸಹಿ ಮಾಡಿದ್ದೇನೆ ಎಂದರೆ ಕೇವಲ ಸಹಿ ಪಡೆದಿರುತ್ತಾರೆ ಎಂದು ಹೇಳುತ್ತಾರೆ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಆರೋಪಿ ಪರ ಶ್ರೀ ಎನ್.ಆರ್.ಎನ್. ವಕೀಲರಿಂದಃ

ಪೊಲೀಸರು ಬಂದು ಹೋಗಿದ್ದರ ಸಲುವಾಗಿ ಸಹಿ ಮಾಡು ಎಂದು ಹೇಳಿದ್ದರಿಂದ ದಾಖಲೆಗೆ ಸಹಿ ಮಾಡಿದ್ದೇನೆ ಎಂದರೆ ಸರಿ. ಪಂಚನಾಮೆಯಲ್ಲಿ ಬರೆದ ಸಂಗತಿ ಮಾಹಿತಿ ಇಲ್ಲ ಎಂದರೆ ಸರಿ. ಸದರಿ ಸಹಿ ಪಡೆದ ದಾಖಲೆ ಯಾವ ಕಾರಣಕ್ಕಾಗಿ ಮಾಡಿರುತ್ತಾರೆಂದು ಹೇಳಲು ಬರುವುದಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.